ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ25-07-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಂ ಜಿ ಎಚ್ ವಕೀಲರಿಂದಃ

ನಾನು ಈ ದಾವೆಯನ್ನು ಸರ್ವೆ ನಂ 104/2 ಕ್ಕೆ ಸಂಬಂದಿಸಿದಂತೆ ದಾಖಲಿಸಿರುತ್ತೇನೆ. ದಾವಾಸ್ತಿ ನನ್ನ ತಂದೆಯ ಮೂಲಕ ನಮ್ಮ ಕುಟುಂಬಕ್ಕೆ ಬಂದಿರುತ್ತದೆ. ದಾವಾಸ್ತಿಯಲ್ಲಿ ಸುಮಾರು 70 ವರ್ಷಗಳಿಂದ ನಾವು ವ್ಯೆವಾಟ ಮಾಡಿಕೊಂಡು ಬರುತ್ತಿದ್ದೇನೆ. ದಾವಾಸ್ತಿಯ ಸರ್ವೆ ಮತ್ತು ಪೋಡಿ ಆಗಿರುವುದಿಲ್ಲ. ದಾವಾಸ್ತಿಗೆ ಸಂಬಂದಿಸಿದಂತೆ ಗಡಿಯನ್ನು ನಿರ್ಧರಿಸುವ ಬಗ್ಗೆ ನಾನು ಸರ್ವೆ ಇಲಾಖೆಯವರಿಗೆ ಯಾವುದೇ ಅರ್ಜಿ ನೀಡಿಲ್ಲ.

2. 1 ರಿಂದ 3 ನೇ ಪ್ರತಿವಾದಿಗಳು ನಮ್ಮ ಊರಿನವರು ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಗಳ ಮನೆ 100 ಅಡಿ ಅಂತರದಲ್ಲಿ ಇರುತ್ತದೆ. ದಾವಾಸ್ತಿಯ ಯಾವ ದಿಕ್ಕಿಗೆ ಪ್ರತಿವಾದಿಗಳ ಮನೆ ಇರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಮ್ಮ ಮನೆ ಸುಮಾರು 70 ವರ್ಷಗಳಿಂದ ಇರುತ್ತದೆ. ಪ್ರತಿವಾದಿಗಳ ಮನೆ ಸುಮಾರು 50 ವರ್ಷಗಳಿಂದ ಇರುತ್ತದೆ.

3. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾವು ಮಾಹಿತಿ ನೀಡಿರುತ್ತೇವೆ. ಪ್ರತಿವಾದಿಗಳು ನಮ್ಮ ಮಾಲ್ಕಿ ಜಾಗದಲ್ಲಿ ಮನೆ ಕಟ್ಟಿರುವ ಬಗ್ಗೆ ಈ ದಾವೆ ಸಲ್ಲಿಸಿರುತ್ತೇನೆ. ನನ್ನ ದಾವೆ ಜೊತೆ ಸಲ್ಲಿಸಿರುವ ಹಾತ ನಕಾಶೆ ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಹಾತ ನಕಾಶೆಯಲ್ಲಿ ಪ್ರತಿವಾದಿಗಳು ಎಲ್ಲಿ ಮನೆ ಕಟ್ಟಿರುತ್ತಾರೆ ಎಂದು ತೋರಿಸಿಲ್ಲ ಎಂದರೆ ಸರಿ. ದಾವಾಸ್ತಿಯ ಯಾವ ದಿಕ್ಕಿನಲ್ಲಿ ಪ್ರತಿವಾದಿಗಳು ಮನೆ ಕಟ್ಟಿರುತ್ತಾರೆ ಎಂದು ನಾನು ನನ್ನ ದಾವೆಯಲ್ಲಿನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ದಾವೆಯಲ್ಲಿ ಹೇಳಿದ ದಾವಾಸ್ತಿಯಲ್ಲಿ ಕಟ್ಟುತ್ತಿರುವ ಪ್ರತಿವಾದಿಗಳ ಹೊಸ ಮನೆ ಪೂರ್ಣ ಗೊಂಡಿರುತ್ತದೆ. ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗಳು ದಾವಾಸ್ತಿಯಲ್ಲಿ ಸದರಿ ಮನೆಯ ಕಾಮಗಾರಿ ಪೂರ್ಣಗೊಳಿಸಿರುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಗಳ ಮನೆ ಕಾಮಗಾರಿ ಪೂರ್ಣ ಗೊಂಡಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಗಳ ಮನೆ ಕಾಮಗಾರಿ ಪೂರ್ಣ ಗೊಂಡಿರುವ ಬಗ್ಗೆ ನಾನು ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

4. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ದಾವಾಸ್ತಿಯಲ್ಲಿ ಹೊಸ ಮನೆಯನ್ನು ಕಟ್ಟಿರುವ ಬಗ್ಗೆ ಮತ್ತು ಅದರ ಕಾಮಗಾರಿ ಪೂರ್ಣ ಗೊಂಡಿರುವ ಬಗ್ಗೆ ನಮೂದಿಸಿಲ್ಲ.

ಈ ಹಂತದಲ್ಲಿ 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**